154 ಶಿ ೮ ಶಿ ನಿ=72 = (94)
4KR
0108

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ ಇವರ ನಿಯಮ-72ರ ಅಡಿಯಲ್ಲಿನ ಗಮನ ಸೆಳೆಯುವ ಸೂಚನೆ ಸಂಖ್ಯೆ:94 ಕ್ಕೆ ಉತ್ತರ.**

## ಸೂಚನೆ

ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ವತಿಯಿಂದ ಸಾವಿರಾರು ಎಕರೆ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ. ಈ ಕೈಗಾರಿಕಾ ಟೌನ್ ಶಿಪ್ ನಿರ್ಮಾಣಕ್ಕಾಗಿ ರೈತರು ತಮ್ಮ ಫಲವತ್ತಾದ ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಅಂತಹ ರೈತರಿಗೆ ಪರಿಹಾರ ನೀಡಲು ವಿಳಂಬವಾಗುತ್ತಿದೆ. ಅವರ ಜಮೀನಿನಲ್ಲಿ ಇರುವ ಗಿಡ, ಮರಗಳಿಗೆ ಪರಿಹಾರ ನೀಡುವಾಗ ಅಧಿಕಾರಿಗಳು ಮತ್ತು ಮಧ್ಯವರ್ತಿಗಳು ಸೇರಿ ರೈತರನ್ನು ವಂಚಿಸುತ್ತಿದ್ದಾರೆ. ಅವರಿಗೆ ಪರಿಹಾರ ನಿಗದಿ ಮಾಡುವಾಗಲೂ ಸಹ ಮಾರುಕಟ್ಟೆಯ ದರವನ್ನು ಪರಿಗಣಿಸಿ ಸೂಕ್ತ ಪರಿಹಾರ ನಿಗದಿಗೊಳಿಸಬೇಕು.

ನಾಗರೀಕ ಸೌಲಭ್ಯಕ್ಕೆ ಮೀಸಲಿರಿಸಿದ ಸಿಎ ನಿವೇಶನಗಳನ್ನು ಹಂಚಿಕೆ ಮಾಡುವಾಗ ಸ್ಥಳೀಯರಿಗೆ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ಭೂಮಿಯನ್ನು ಕಳೆದುಕೊಂಡು ನಿರುದ್ಯೋಗಿಗಳಾದ ರೈತರು ಮತ್ತು ಅವರ ಕುಟುಂಬದವರು ಉದ್ಯೋಗಕ್ಕಾಗಿ ಬೆಂಗಳೂರಿಗೆ ವಲಸೆ ಬರುವಂತಾಗಿದೆ. ಆದ್ದರಿಂದ ಜಿಲ್ಲೆಯಲ್ಲಿ ಕೆಐಎಡಿಬಿ ವತಿಯಿಂದ ಕೈಗಾರಿಕಾ ನಿವೇಶನ ಪಡೆದು ಪ್ರಾರಂಭಿಸಲಾದ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಮೀಸಲಾತಿ ನೀಡುವ ಮೂಲಕ ಸ್ಥಳೀಯರು ವಲಸೆ ಹೋಗುವುದನ್ನು ತಡೆಯಬೇಕು ಎನ್ನುವ ಗಂಭೀರ ವಿಷಯಗಳ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

## ಹೇಳಿಕೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರಾಜ್ಯದಾದ್ಯಂತ ಕೈಗಾರಿಕಾ ಉದ್ದೇಶಗಳಿಗೆ ಭೂಸ್ವಾಧೀನಪಡಿಸಿ ಅಭಿವೃದ್ಧಿ ಪ್ರಕ್ರಿಯೆ ಕೈಗೊಂಡು, ನಿಯಮಾನುಸಾರ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡುತ್ತಿದೆ. ಹೆಚ್ಚಿನ ಕೈಗಾರಿಕಾ ಉದ್ಯಮಿಗಳು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ರೈಲ್ವೆ ಸಂಪರ್ಕ ಮತ್ತು ಇತರೆ ಮೂಲಸೌಲಭ್ಯಗಳ ಕಾರಣಗಳಿಗಾಗಿ, ಬೆಂಗಳೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ತಮ್ಮ ಉದ್ಯಮವನ್ನು ಸ್ಥಾಪಿಸಲು ಇಚ್ಛಿಸುತ್ತಿರುವುದರ ಜೊತೆಗೆ, ಸಂಪನ್ಮೂಲಗಳ ಲಭ್ಯತೆ ಆಧಾರದ ಮೇರೆಗೆ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಹಾಗೂ ಕರ್ನಾಟಕದ ಕರಾವಳಿ ಪ್ರದೇಶಗಳ ಜೊತೆಗೆ ಎಲ್ಲಾ ಭಾಗಗಳು ಭೂಸ್ವಾದೀನಪಡಿಸಿ ಕೈಗಾರಿಕಾ ಉದ್ಯಮಿಗಳಿಗೆ ಹಂಚಿಕೆ ಮಾಡುತ್ತಿದ್ದು, ತುಮಕೂರು ಜಿಲ್ಲೆಯಲ್ಲಿ ಸಹ **ಅನುಬಂಧ-1** ರಲ್ಲಿ ವಿವರಿಸಿರುವಂತೆ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದೆ ಮತ್ತು ಕೆಲವು ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ರಾಜ್ಯದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಪರಿಹಾರ ದರ ನಿಗದಿಪಡಿಸುವ ಸಂಬಂಧ ಆಯಾ ಜಿಲ್ಲಾಧಿಕಾರಿಗಳು ಮತ್ತು ಮಂಡಳಿಯ ವಿಶೇಷ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಭೂದರ ನಿರ್ದರಣಾ ಸಲಹಾ ಸಮಿತಿ ಸಭೆಗಳಲ್ಲಿ ಭೂಮಾಲೀಕರೊಂದಿಗೆ ಸಮಾಲೋಚಿಸಿ ಆಯಾ

ಗ್ರಾಮಗಳ ಮಾರ್ಗಸೂಚಿ ದರ ಹಾಗೂ ಮಾರುಕಟ್ಟೆ ದರಗಳನ್ನು ಪರಿಗಣಿಸಿ ಶಿಫಾರಸ್ಸು ಮಾಡಲಾಗುವ ದರಕ್ಕೆ ಮಂಡಳಿ ಸಭೆಯ ಅನುಮೋದನೆ ಪಡೆದು ಪರಿಹಾರ ದರ ನಿಗದಿಪಡಿಸ ಲಾಗುತ್ತದೆ. ಹಾಗೂ ಮಧ್ಯವರ್ತಿಗಳನ್ನು ತಡೆಗಟ್ಟಲು ಖಾತೆದಾರರ ಜಮೀನಿನ ಪರಿಹಾರವನ್ನು ಸಂಬಂಧಪಟ್ಟ ಹಿತಾಸಕ್ತದಾರರಿಗೆ/ ಖಾತೆದಾರರಿಗೆ ಆರ್.ಟಿ.ಜಿ.ಎಸ್ ಮುಖಾಂತರ ನೇರವಾಗಿ ರೈತರ ಖಾತೆಗಳಿಗೆ ಹಣವನ್ನು ಜಮಾ ಮಾಡಲಾಗುತ್ತದೆ.

ಮರ/ಮಾಲ್ಕಿ ಸಂಬಂಧಿಸಿದಂತೆ ಕೆಐಎಡಿಬಿ ಕಾಯ್ದೆಯನ್ವಯ ನಿಯಮಾನುಸಾರ ಅರಣ್ಯ / ತೋಟಗಾರಿಕಾ ಇಲಾಖೆಗಳಿಂದ ಮೌಲ್ಯಮಾಪನ ವರದಿ ಪಡೆದು, ಹಾಗೂ ಕಟ್ಟಡ ವಿನ್ಯಾಸಗಳಿಗೆ ಮಂಡಳಿಯ ಅಭಿವೃದ್ಧಿ ಶಾಖೆಯಿಂದ ಮೌಲ್ಯಮಾಪನ ವರದಿ ಪಡೆದು ಪರಿಹಾರ ಪಾವತಿಸಲು ಕ್ರಮ ವಹಿಸಲಾಗುತ್ತದೆ.

ಮುಂದುವರೆದು, ನಾಗರೀಕ ಸೌಲಭ್ಯಗಳಿಗೆ ಮೀಸಲಿರುವ ಸಿಎ/ಅಮೆನಿಟಿ ನಿವೇಶನಗಳನ್ನು ಹಂಚಿಕೆ ಮಾಡುವಾಗ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಯು ಅರ್ಜಿದಾರರು ಸಲ್ಲಿಸುವ ಯೋಜನೆ ಹಾಗೂ ಬಂಡವಾಳ ಹೂಡಿಕೆಗಳನ್ನು ಪರಿಶೀಲಿಸಿ, ಆಯಾ ಕೈಗಾರಿಕಾ ಪ್ರದೇಶಗಳಲ್ಲಿ ಅವಶ್ಯವಿರುವ ನಾಗರೀಕ ಸೌಲಭ್ಯಗಳಿಗೆ ಅನುಗುಣವಾಗಿ ಹಾಗೂ ಕೈಗಾರಿಕೆಗಳಿಗೆ ಪೂರಕವಾಗಿರುವಂತಹ ಯೋಜನೆಗಳನ್ನು ಹಂಚಿಕೆ ಮಾಡಲು ಆಯ್ಕೆ ಮಾಡುತ್ತದೆ. ಸ್ಥಳೀಯ ಉದ್ದಿಮೆದಾರರು ಅರ್ಜಿ ಸಲ್ಲಿಸಿದಲ್ಲಿ ಅರ್ಹತೆಯ ಮೇರೆಗೆ ಅವರ ಅರ್ಜಿಗಳನ್ನು ಪರಿಗಣಿಸಲಾಗುತ್ತದೆ.

ಮಂಡಳಿಯಿಂದ ಹಂಚಿಕೆದಾರರೊಂದಿಗೆ ನೆರವೇರಿಸುತ್ತಿರುವ ಗುತ್ತಿಗೆ ಕರಾರು ಪತ್ರದಲ್ಲಿ ಸರ್ಕಾರದ ಕೈಗಾರಿಕಾ ನೀತಿ ಅನುಸಾರ ಉದ್ಯೋಗಾವಕಾಶ ಕಲ್ಪಿಸಬೇಕೆಂಬ ಷರತ್ತನ್ನು ವಿಧಿಸಲಾಗಿದೆ. ಅಲ್ಲದೇ, ಜಮೀನು ಕಳೆದುಕೊಂಡ ಕುಟುಂಬದ ಕನಿಷ್ಟ ಒಬ್ಬ ಸದಸ್ಯನಿಗೆ ಉದ್ಯೋಗಾವಕಾಶ ಒದಗಿಸಲು ಷರತ್ತು ವಿಧಿಸಲಾಗಿದೆ. ಅದರನ್ವಯ ಕೈಗಾರಿಕೆಗಳು ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ಪಡೆಯುವ ಮುಂಚೆ ಸ್ಥಳೀಯರಿಗೆ ಉದ್ಯೋಗ ಒದಗಿಸುತ್ತಿರುತ್ತಾರೆ.

**(ಸಂಖ್ಯೆ:ಸಿಐ 579 ಐಎಪಿ 2024)**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಅನುಬಂಧ-1

## ತುಮಕೂರು ಜಿಲ್ಲೆಯಲ್ಲಿ ಭೂಸ್ವಾಧೀನಪಡಿಸಿದ ಜಮೀನುಗಳ ವಿವರ

| ಕ್ರ. ಸಂ | ಕೈಗಾರಿಕಾ ಪ್ರದೇಶ | ಕಲಂ 28(4) ರಡಿ ಅಧಿಸೂಚನೆ ಸಂಖ್ಯೆ | ವಿಸ್ತೀರ್ಣ | ದರ ನಿಗದಿಪಡಿಸಿರುವ ವಿವರ ಎಕರೆಗೆ | ಪರಿಹಾರ ಪಾವತಿಸಿರುವ ವಿಸ್ತೀರ್ಣ | ಷರಾ | ಪ್ರಸ್ತುತ ಕೈಗಾರಿಕಾ ಪ್ರದೇಶದ ವರದಿ |
|---|---|---|---|---|---|---|---|
| 1 | ವಸಂತನರಸಾಪುರ ಕೈಗಾರಿಕಾ ಪ್ರದೇಶ 1ನೇ ಹಂತ | ಸಿಐ 25 ಎಸ್ ಪಿಕ್ಯೂ 2007 ದಿನಾಂಕ: 27-02-2007 | 782-22 | 4.50 ಲಕ್ಷ<br>6.50 ಲಕ್ಷ | 636-15¼ | 97-22 ಎಕರೆ ಸರ್ಕಾರಿ ಹಾಗೂ 43-14 ಎಕರೆ ಹಿಡುವಳಿ ಖರಾಬ್ ಜಮೀನಾಗಿರುತ್ತದೆ.<br>ಜೆಎಂಸಿಯಂತೆ ಇರುವ ಮರ, ಮಾಲ್ಕಿ ಕಟ್ಟಡ ವಿನ್ಯಾಸಗಳಿಗೆ ಪರಿಹಾರ ಪಾವತಿಸಿದೆ.<br>ಒಟ್ಟು ರೂ.26,38,40,509=00 ಗಳ ಪರಿಹಾರ ಪಾವತಿಸಿದೆ.<br>782-22 ಎಕರೆ ಕಲಂ 28(8) ರಡಿ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ.<br>ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |
| 2 | ವಸಂತನರಸಾಪುರ ಕೈಗಾರಿಕಾ ಪ್ರದೇಶ 2ನೇ ಹಂತ | ಸಿಐ 322 ಎಸ್ ಪಿಕ್ಯೂ 2010 ದಿನಾಂಕ: 06-07-2010 | 1242-19 | 16.00 ಲಕ್ಷ<br>17.00 ಲಕ್ಷ | 841-29 | 351-27 ಎಕರೆ ಸರ್ಕಾರಿ ಹಾಗೂ 25-00 ಎಕರೆ ಹಿಡುವಳಿ ಖರಾಬ್ ಜಮೀನಾಗಿರುತ್ತದೆ.<br>ಒಟ್ಟು ರೂ. 123,59,49,881=00 ಗಳ ಪರಿಹಾರ ಪಾವತಿಸಿದೆ.<br>ಜೆಎಂಸಿಯಂತೆ ಇರುವ ಮರ, ಮಾಲ್ಕಿ ಕಟ್ಟಡ ವಿನ್ಯಾಸಗಳಿಗೆ ಪರಿಹಾರ ಪಾವತಿಸಿದೆ.<br>1242-19 ಎಕರೆ ಕಲಂ 28(8) ರಡಿ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |

| | | | | | | | |
|---|---|---|---|---|---|---|---|
| | | | | | | ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. | |
| 3 | ವಸಂತನರಸಾಪುರ ಕೈಗಾರಿಕಾ ಪ್ರದೇಶ 2ನೇ ಹಂತದ ಹೆಚ್ಚುವರಿ | ಸಿಐ 322 ಎಸ್ ಪಿಕ್ಯೂ 2010 ದಿನಾಂಕ: 03-08-2012 | 21-12 | 16.00 ಲಕ್ಷ<br>17.00 ಲಕ್ಷ | 20-34 | 0-18 ಗುಂಟೆ ಹಿಡುವಳಿ ಖರಾಬ್ ಜಮೀನಾಗಿರುತ್ತದೆ.<br>ಒಟ್ಟು ರೂ. 2,18,11,324=00 ಗಳ ಪರಿಹಾರ ಪಾವತಿಸಿದೆ.<br>ಜೆಎಂಸಿಯಂತೆ ಇರುವ ಮರ, ಮಾಲ್ಕಿ ಕಟ್ಟಡ ವಿನ್ಯಾಸಗಳಿಗೆ ಪರಿಹಾರ ಪಾವತಿಸಿದೆ.<br>ಈ ಜಮೀನುಗಳು ಈಗಾಗಲೇ ಕಲಂ 28(8) ರಡಿ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ.<br>ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |
| 4 | ವಸಂತನರಸಾಪುರ ಕೈಗಾರಿಕಾ ಪ್ರದೇಶ 3ನೇ ಹಂತ | ಸಿಐ 322 ಎಸ್ ಪಿಕ್ಯೂ 2010 ದಿನಾಂಕ: 23-07-2010 | 1424-29½ | 16.00 ಲಕ್ಷ<br>17.00 ಲಕ್ಷ | 1238-17¾ | 151-16 ಎಕರೆ ಸರ್ಕಾರಿ,64-15 ಎಕರೆ ಹಿಡುವಳಿ ಖರಾಬ್ ಜಮೀನಾಗಿದೆ. 9-05 ಎಕರೆ ಗ್ರಾಮಠಾಣ ಜಮೀನಾಗಿದೆ. ಜಮೀನು 4-24 ಎಕರೆ ಜಮೀನು ಸೆಕ್ಷನ್ 4 ರಡಿ ಪ್ರಸ್ತಾವನೆ ಕೇಂದ್ರ ಕಛೇರಿಗೆ ಸಲ್ಲಿಸಿದೆ. 7-37 ಎಕರೆ ಜಮೀನಿನ ಅಧಿಸೂಚನೆ ವಜಾಗೊಂಡಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಕಾರ್ಯಪಾಲಕ ಅಭಿಯಂತರರುರವರಿಗೆ ಪತ್ರ ಬರೆಯಲಾಗಿದೆ.<br>ಒಟ್ಟು ರೂ. 167,67,72,086=00 ಗಳ ಪರಿಹಾರ ಪಾವತಿಸಿದೆ.ಯಂತೆ ಇರುವ ಮರ, ಮಾಲ್ಕಿ ಕಟ್ಟಡ ವಿನ್ಯಾಸಗಳಿಗೆ ಪರಿಹಾರ ಪಾವತಿಸಿದೆ.<br>1392-21½ ಎಕರೆ ಜಮೀನು ಈಗಾಗಲೇ | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |

| | | | | | | | |
|---|---|---|---|---|---|---|---|
| | | | | | | ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. ಭಾಗಶಃ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. | |
| 5 | ವಸಂತನರಸಾಪುರ ಕೈಗಾರಿಕಾ ಪ್ರದೇಶ 3ನೇ ಹಂತದ ಹೆಚ್ಚುವರಿ | ಸಿಐ 322 ಎಸ್ ಪಿಕ್ಯೂ 2010 ದಿನಾಂಕ: 03-08-2012 | 127-39 | 16.00 ಲಕ್ಷ<br>17.00 ಲಕ್ಷ | 118-03 | 9-36 ಹಿಡವಳಿ ಖರಾಬ್ ಜಮೀನಾಗಿದೆ.<br>ಒಟ್ಟು ರೂ. 18,11,79,385=00 ಗಳ ಪರಿಹಾರ ಪಾವತಿಸಿದೆ.<br>127-39 ಎಕರೆ ಜಮೀನು ಈಗಾಗಲೇ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |
| 6 | ಇಂಟೆಗ್ರೇಟೆಡ್ ಫುಡ್ ಪಾರ್ಕ ಲಿಮಿಟೆಡ್ | ಸಿಐ 564 ಎಸ್ ಪಿಕ್ಯೂ 2013ದಿನಾಂಕ: 31-10-2013 | 16-23 | 22.00 ಲಕ್ಷ | 14-16 | 1-27 ಎಕರೆ ಹಿಡುವಳಿ ಖರಾಬ್ ಜಮೀನಾಗಿದೆ.<br>ಒಟ್ಟು ರೂ. 3,21,60,000=00 ಗಳ ಪರಿಹಾರ ಪಾವತಿಸಿದೆ.<br>16-23 ಎಕರೆ ಜಮೀನು ಈಗಾಗಲೇ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ.<br>ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |
| 7 | ಪವರ್ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ | ಸಿಐ 298 ಎಸ್ ಪಿಕ್ಯೂ 2012 ದಿನಾಂಕ: 27-06-2012 | 49-16 | 16.00 ಲಕ್ಷ | 44-31 | 4-25 ಎಕರೆ ಖರಾಬ್ ಜಮೀನಾಗಿದೆ.<br>ಒಟ್ಟು ರೂ. 7,66,71,667=00 ಗಳ ಪರಿಹಾರ ಪಾವತಿಸಿದೆ.<br>49-16 ಎಕರೆ ಜಮೀನು ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | ಚಾಲ್ತಿಯಲ್ಲಿದೆ |

| | | | | | | | |
|---|---|---|---|---|---|---|---|
| 8 | ತುಮಕೂರು ಮಷಿನ್ ಟೂಲ್ಸ್ ಪಾರ್ಕ್ | ಸಿಐ 129 ಎಸ್ ಪಿಕ್ಯೂ 2016 ದಿನಾಂಕ: 20-07-2018 | 52-31 | 50.00 ಲಕ್ಷ | 45-22 | 0-29 ಗುಂಟೆ ಸರ್ಕಾರಿ, 5-30 ಎಕರೆ ಜಮೀನು ಹಿಡುವಳಿ ಖರಾಬ್ ಆಗಿರುತ್ತದೆ.<br>ಒಟ್ಟು ರೂ. 17,41,67,080=00 ಗಳ ಪರಿಹಾರ ಪಾವತಿಸಿದೆ.<br>ಜೆಎಂಸಿಯಂತೆ / ಜಂಟಿ ಸ್ಥಳ ತನಿಖಾ ವರದಿಯಂತೆ ಇರುವ ಮರ-ಮಾಲ್ಕಿಗಳಿಗೆ ಪರಿಹಾರ ಪಾವತಿಸಿದೆ.<br>52-02 ಎಕರೆ ಜಮೀನು ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |
| 9 | ಜಪಾನೀಸ್ ಇಂಡಸ್ಟ್ರಿಯಲ್ ಟೌನ್ ಶಿಪ್ ಪಾರ್ಕ್ | ಸಿಐ 217 ಎಸ್ ಪಿಕ್ಯೂ 2017 ದಿನಾಂಕ: 12-10-2017 | 68-04 | 50.00 ಲಕ್ಷ<br>52.00 ಲಕ್ಷ<br>57.00 ಲಕ್ಷ<br>59.00 ಲಕ್ಷ | 63-09 | 2-18 ಹಿಡವಳಿ ಖರಾಬ್ ಜಮೀನಾಗಿದೆ. 2-17 ಎಕರೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವುದರಿಂದ ಐತೀರ್ಪು ಮೊಬಲಗು ನ್ಯಾಯಾಲಯಕ್ಕೆ ಠೇವಣಿ ಮಾಡಿರುವುದಿಲ್ಲ.<br>ಒಟ್ಟು ರೂ. 23,98,33,834 ಗಳ ಪರಿಹಾರ ಪಾವತಿಸಿದೆ.<br>ಜೆಎಂಸಿಯಂತೆ / ಜಂಟಿ ಸ್ಥಳ ತನಿಖಾ ವರದಿಯಂತೆ ಇರುವ ಮರ, ಮಾಲ್ಕಿ ಕಟ್ಟಡ ವಿನ್ಯಾಸಗಳಿಗೆ ಪರಿಹಾರ ಪಾವತಿಸಿದೆ.<br>65-24 ಎಕರೆ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |

| | | | | | | | |
|---|---|---|---|---|---|---|---|
| 10 | ವಸಂತನರಸಾಪುರ ಕೈಗಾರಿಕಾ ಪ್ರದೇಶ 4ನೇ ಹಂತ | ಸಿಐ 10 ಎಸ್ ಪಿಕ್ಯೂ 2014 ದಿನಾಂಕ: 30-10-2014 | 1722-30 | 30.00 ಲಕ್ಷ<br>35.00 ಲಕ್ಷ | 1193-26 | 452-11 ಎಕರೆ ಸರ್ಕಾರಿ ಜಮೀನಾಗಿದೆ.<br>23-01 ಎಕರೆ ಹಿಡುವಳಿ ಖರಾಬ್ ಜಮೀನಾಗಿದೆ. ಒಟ್ಟು ರೂ. 300,77,52,691=00 ಗಳ ಪರಿಹಾರ ಪಾವತಿಸಿದೆ.<br>ಜೆಎಂಸಿಯಂತೆ / ಜಂಟಿ ಸ್ಥಳ ತನಿಖಾ ವರದಿಯಂತೆ ಇರುವ ಮರ-ಮಾಲ್ಕಿಗಳಿಗೆ ಪರಿಹಾರ ಪಾವತಿಸಿದೆ.<br>1706-06 ಎಕರೆ ಜಮೀನು ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | ಸದರಿ ಪ್ರದೇಶದಲ್ಲಿ ಉದ್ದೇಶಿತ ಚೆನ್ನೈ ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ ಯೋಜನೆ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದೆ |
| 11 | ವಸಂತನರಸಾಪುರ ಕೈಗಾರಿಕಾ ಪ್ರದೇಶ 4ನೇ ಹಂತದ ಹೆಚ್ಚುವರಿ | ಸಿಐ 84 ಎಸ್ ಪಿಕ್ಯೂ(ಇ) 2022 ದಿನಾಂಕ: 13-06-2024 | 41-02 | ದರ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ | | | |
| 12 | ವಸಂತನರಸಾಪುರ ಕೈಗಾರಿಕಾ ಪ್ರದೇಶ 5ನೇ ಹಂತ | ಸಿಐ 90 ಎಸ್ ಪಿಕ್ಯೂ(ಇ) 2024 ದಿನಾಂಕ: 24-06-2024 | 1929-20¼ | ದರ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ | | | |
| 13 | ಮುದಿಗೆರೆಕಾವಲ್ ಕೈಗಾರಿಕಾ ಪ್ರದೇಶ | ಸಿಐ 407 ಎಸ್ ಪಿಕ್ಯೂ 2010 ದಿನಾಂಕ: 19-08-2010 | 2051-24 | 35.00 ಲಕ್ಷ<br>30.00 ಲಕ್ಷ<br>25.00 ಲಕ್ಷ<br>18.00 ಲಕ್ಷ | 720-36¾ | ಉಳಿಕೆ 131-00 ಎಕರೆ ಜಮೀನಿಗೆ ಪರಿಹಾರ ಪಾವತಿ ಪ್ರಗತಿಯಲ್ಲಿದೆ. ಸ.ನಂ 12 ರ 203-00 ಎಕರೆ ಜಮೀನು ಸರ್ಕಾರಿ ಜಮೀನಾಗಿದ್ದು, ಮಂಜೂರಾಗಿರುತ್ತದೆ. ದರ ನಿಗದಿಪಡಿಸಿರುವುದಿಲ್ಲ ಒಟ್ಟು ರೂ. 120,79,89,826 =00 ಗಳ ಪರಿಹಾರ ಪಾವತಿಸಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |

| | | | | | | | |
|---|---|---|---|---|---|---|---|
| | | | | | | ಜೆಎಂಸಿಯಂತೆ / ಜಂಟಿ ಸ್ಥಳ ತನಿಖಾ ವರದಿಯಂತೆ ಇರುವ ಮರ-ಮಾಲ್ಕಿಗಳಿಗೆ ಪರಿಹಾರ ಪಾವತಿಸಿದೆ.<br>818-00 ಎಕರೆ ಸರ್ಕಾರಿ ಜಮೀನಾಗಿದೆ<br>1583-01 ಎಕರೆ ಜಮೀನು ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | |
| 14 | ಮುದಿಗೆರೆಕಾವಲ್ ಕೈಗಾರಿಕಾ ಪ್ರದೇಶದ ಹೆಚ್ಚುವರಿ | ಸಿಐ 217 ಎಸ್ ಪಿಕ್ಯೂ 2017 ದಿನಾಂಕ: 13-02-2019 | 29-26 | 30.00 ಲಕ್ಷ<br>33.00 ಲಕ್ಷ | 22-17 | 6-39 ಎಕರೆಗೆ ಅಭಿವೃದ್ಧಿ ಹೊಂದಿದ ಜಮೀನು ಕೋರಿರುತ್ತಾರೆ. 0-09 ಗುಂಟೆ ಹಿಡುವಳಿ ಖರಾಬ್ ಜಮೀನಾಗಿದೆ.<br>ಒಟ್ಟು ರೂ. 6,47,35,081=00 ಗಳ ಪರಿಹಾರ ಪಾವತಿಸಿದೆ.<br>29-26 ಎಕರೆ ಜಮೀನು ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ, ತುಮಕೂರುರವರಿಗೆ ಹಸ್ತಾಂತರ ಮಾಡಲಾಗಿದೆ. | ಸದರಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಘಟಕಗಳು ಚಾಲ್ತಿಯಲ್ಲಿರುತ್ತವೆ |
| 15 | ಮಧುಗಿರಿ ಕೈಗಾರಿಕಾ ಪ್ರದೇಶ | ಸಿಐ 80 ಎಸ್ ಪಿಕ್ಯೂ(ಇ) 2019 ದಿನಾಂಕ: 21-01-2022 | 297-02 | 17.00 ಲಕ್ಷ | ಭೂಮಾಲೀಕರು ಕ್ಲೇಮ್ ಅರ್ಜಿ ಸಲ್ಲಿಸಿರುವುದಿಲ್ಲ | | ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ |
| | ಒಟ್ಟು | | **9864-05.04** | | | | |

| ಕ್ರ. ಸಂ | ಕೈಗಾರಿಕಾ ಪ್ರದೇಶ | ಪ್ರಾಥಮಿಕ ಅಧಿಸೂಚನೆ ಸಂಖ್ಯೆ | ವಿಸ್ತೀರ್ಣ | ಷರಾ |
|---|---|---|---|---|
| 1 | ವಸಂತನರಸಾಪುರ ಕೈಗಾರಿಕಾ ಪ್ರದೇಶ 6ನೇ ಹಂತ | ಸಿಐ 8 ಎಸ್ ಪಿಕ್ಯೂ 10-03-2015 | 4731-39½ | ಜೆಎಂಸಿ ಕಾರ್ಯ ಪ್ರಗತಿಯಲ್ಲಿದೆ |